**ಸಾಕ್ಷಿಗೆ ದಿನಾಂಕ:16-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. DNP ವಕೀಲರಿಂದ ::**

ನನ್ನ ಅಣ್ಣನ ಮಗ ಶರತ್ ಎನ್ನುವವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ದೊಡ್ಡಪ್ಪನ ಮೊಮ್ಮಗ ಲಿಖಿತ್ ಎನ್ನುವವರು ಗ್ರಾಮ ಪಂಚಾಯಿತಿ ಸದಸ್ಯರಾಗಿರುತ್ತಾರೆ ಎಂದರೆ ಸರಿ. ನಾನು ಹಾಗೂ ವಾದಿಗಳು ಒಂದೇ ಗ್ರಾಮದವರಾಗಿರುತ್ತೇವೆ ಎಂದರೆ ಸರಿ. ವಾದಿಗಳ ಜೊತೆ ನಾನು ಒಳ್ಳೆ ವಿಶ್ವಾಸದಲ್ಲಿ ಇರುತ್ತೇನೆ ಎಂದರೆ ಸರಿ. ನನಗೆ ನಾಗವಂಗಲ ಗ್ರಾಮದಲ್ಲಿ 4 ಎಕರೆ ಜಮೀನು ಇರುತ್ತದೆ. ಸಾಕ್ಷಿಯು ಮೊದಲು ಅದರ ಸರ್ವೇ ನಂಬರ್ 115 ಎಂದು ಹೇಳಿ, ನಂತರದಲ್ಲಿ ಅದರ ಸರ್ವೇ ನಂಬರ್ ಈಗ ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿದಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಹೇಳುತ್ತಿರುವ ಈರಪ್ಪ ರವರ ಸ್ವಾಧೀನದಲ್ಲಿ ಇರುವ ಜಮೀನಿನ ಖಾತೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಯಾವುದೇ ದಾಖಲಾತಿಯನ್ನು ನಾನು ಇವರೆಗೂ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತು ಯಾರ ಖಾತೆಯಲ್ಲಿ ಇರುತ್ತದೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. 1 ನೇ ವಾದಿಯ ತಂದೆ ಕೆಂಚಪ್ಪ ಎನ್ನುವವರು ಅವರ ಸ್ವತ್ತನ್ನು ಹಿಂದೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳ ಜೊತೆ ನಾನು ಒಳ್ಳೆ ವಿಶ್ವಾಸದಲ್ಲಿ ಇರುವ ಕಾರಣ ಅವರ ಕೋರಿಕೆಯ ಮೇರೆಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿಗಳ ಪೂರ್ವಜ್ಜರು ದಾವಾ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳ ಪೂರ್ವಜ್ಜರಿಗೆ ಹಿಂದೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟದ ಸಮಯದಿಂದ ಪ್ರತಿವಾದಿಗಳ ಕುಟುಂಬದವರೇ ದಾವಾ ಶೆಡ್ಯೂಲ್ ಸ್ವತ್ತನ್ನು ನೋಡಿಕೊಳ್ಳುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕುಟುಂಬದವರಿಗೆ ಬೀರೂರಿನಲ್ಲಿ ಸಹ ಅಡಿಕೆ ತೋಟ ಇರುತ್ತದೆ ಎಂದರೆ ನನಗೆ

ಗೊತ್ತಿಲ್ಲ. ದಾವಾ ಹೂಡುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಜಾಗದ ಖಾತೆ ಬದಲಾವಣೆ ಜಾಗಕ್ಕೆ ಸಂಬಂಧಪಟ್ಟಂತೆ ಆಗಿರುವ ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ಬಟ್ಟೆ ವ್ಯಾಪಾರ ಹಾಗೂ ಟೈಲರಿಂಗ್ ಮಾಡಿಕೊಂಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ದಾವೆಯ ಪ್ರತಿವಾದಿಗಳು ನನಗೆ ಪರಿಚಯ ಇರುವುದಿಲ್ಲ.

ವಾದಿಗಳ ಚಿತ್ತಾವಣೆ ಮೇರೆಗೆ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: